ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-2, September-October 2025, Pp. 86-97
©*IIMRD*, Mysuru
IIMRD JOURNALS
www.iimrd.com

# ಗಾಂಧಿ ಯುಗದ ಮಹಿಳೆಯರು ವಿಶೇಷವಾಗಿ ಕರ್ನಾಟಕವನ್ನು ಅನುಲಕ್ಷಿಸಿ

**ಭಾಗ್ಯ ಹೆಚ್. ಕೆ[1] ಮತ್ತು ಡಾ. ಎಸ್.ಟಿ.ರಾಮಚಂದ್ರ[2]**
[1]ಸಂಶೋಧಕರು, [2]ಮಾರ್ಗದರ್ಶಕರು
ಗಾಂಧಿ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು

**ಸಾರಾಂಶ: (Abstract)**

*ಗಾಂಧಿ ಯುಗವೆಂದರೇ ಅದೊಂದು ಅದ್ಭುತ ಯುಗ ಭಾರತ ದೇಶದ ಜನಸಾಮಾನ್ಯರ ಪಾಲಿನ ಅಮೃತಯುಗವೆಂದೇ ಹೇಳಬಹುದು ಜನರ ಬಾಳಿಗೆ ಪ್ರಕಾಶ ಮಾನವಾದ ಬೆಳಕ್ಕಾಗಿ ಬಂದ ಗಾಂಧೀಜಿಯವರು ಜನರ ಜೀವನವನ್ನೇ ಬದಲಾಯಿಸಿದರು ಭಾರತ ದೇಶದ ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಇನ್ನೂ ಮುಂತಾದ ಕ್ಷೇತ್ರದಲ್ಲಿ ಸುಧಾರಣೆಯನ್ನು ಮಾಡುವ ಪ್ರವಾದಿಯಾಗಿ ಬಂದ ಗಾಂಧಿಯನ್ನು ಜನರು ಪವಾಡ ಪುರುಷನೆಂದೇ ನಂಬಿದ್ದರು ದೇವರ ರೂಪದಲ್ಲಿ ಬಂದ ಗಾಂಧೀಜಿಯವರ ಮಾತು ವೇದವಾಕ್ಯವಾಗಿತ್ತು. ಅವರ ನಡೆ ನುಡಿ ಚಲನ ವಲನಗಳು ದೇಶದ ಜನರ ದಾರಿ ದೀಪವಾಗಿತ್ತು. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಗಾಂಧಿ ಮುಟ್ಟದ ಕ್ಷೇತ್ರವಿರಲಿಲ್ಲ ಅವರು ಮಾಡದೇ ಇರುವ ಹೋರಾಟಗಳಲ್ಲಿ ಅವರು ಅನುಭವಿಸದೇ ಇರುವ ಶಿಕ್ಷೆಗಳಿರಲಿಲ್ಲ. ಆದರೂ ಅವರು ಎಂದಿಗೂ ಎದೆಗುಂದಲಿಲ್ಲ ದೃತಿಗೆಡಲಿಲ್ಲ ಅವರಿಗೆ ಎಂದೂ ದಣಿವಾಗಲಿಲ್ಲ ಯಾವುದೇ ಸ್ವಾರ್ಥ ಭಾವನೆ ಇಲ್ಲದೇ ಯಾವುದೇ ದುರಾಸೆಯಿಲ್ಲದೆ. ಕೇವಲ ದೇಶಕ್ಕಾಗಿ ದೇಶದ ಜನರಿಗಾಗಿ ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟು ದೇಶಕ್ಕೆ ಸ್ವಾತಂತ್ರ ತಂದುಕೊಟ್ಟ ಮಹಾನ್ ದೇಶ ಪ್ರೇಮಿ ಗಾಂಧೀಜಿಯವರು. ಇವರಿಗೆ ಸರಿಸಾಟಿ ಇನ್ನೊಬ್ಬರಿಲ್ಲ ಇವರಿಗೆ ಇವರೇ ಸರಿಸಾಟಿ ಎಂದರೇ ತಪ್ಪಲ್ಲ.*

**ಮುಖ್ಯಪದಗಳು (Keywords):** *ಮಹಾತ್ಮ ಗಾಂಧೀಜಿ, ಗಾಂಧಿಯುಗ, ಹೋರಾಟ, ಮಹಿಳೆಯರು*

## ಪೀಠಿಕೆ

1919 ರಿಂದ 1947ರ ಯುಗವನ್ನು ಗಾಂಧಿಯುಗವೆಂದೇ ಕರೆಯಲಾಗುತ್ತದೆ. ಈ ಯುಗದಲ್ಲಿ ಗಾಂಧೀಜಿಯವರ ಆಗಮನ ಮತ್ತು ಗಾಂಧೀಜಿಯವರ ಹೋರಾಟಗಳು ಸಾಮಾಜಿಕ ಸುಧಾರಣೆಗಳು ಅಂತಿಮವಾಗಿ ಸ್ವಾತಂತ್ರದಗಳಿಗೆ ಮೊದಲಾದವುಗಳನ್ನು ನಾವು ನೋಡಬಹುದಾಗಿದೆ. ಸ್ವಾತಂತ್ರ್ಯ ಪೂರ್ವದ ಈ ಯುಗ ಅಂದರೆ ಗಾಂಧೀಜಿಯವರು ಭಾರತಕ್ಕೆ ಬಂದಂತಹ ಸಂದರ್ಭದಲ್ಲಿ ಭಾರತದಲ್ಲಿ ತಾಂಡವಾಡುತ್ತಿದ್ದ, ಬಡತನ, ಅಸ್ಪೃಶ್ಯತೆ, ಬಾಲ್ಯವಿವಾಹ, ಸತಿ ಸಹಗಮನ ಪದ್ಧತಿ ಬಹು ಪತ್ನಿತ್ವ, ಮದ್ಯಪಾನ, ಅನಕ್ಷರತೆ ಮೊದಲಾದ ಪಿಡುಗುಗಳಿಂದ ಮಹಿಳೆಯರ ಸ್ಥಿತಿ ಚಿಂತಾ ಜನಕವಾಗಿತ್ತು. ಸ್ವಾತಂತ್ರ್ಯ

*Please cite this article as:* ಭಾಗ್ಯ ಹೆಚ್. ಕೆ ಮತ್ತು ಎಸ್.ಟಿ.ರಾಮಚಂದ್ರ. (2025). ಗಾಂಧಿ ಯುಗದ ಮಹಿಳೆಯರು ವಿಶೇಷವಾಗಿ ಕರ್ನಾಟಕವನ್ನು ಅನುಲಕ್ಷಿಸಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(2). ಪು.ಸಂ.* 86–97

ಪೂರ್ವದಲ್ಲಿ, ಅರಬ್ಬರು ಪ್ರೇಚರು, ಡಚ್ಚರು, ಪೋರ್ಚುಗೀಸರು ಹಾಗೂ ಬ್ರಿಟಿಷರು ಮಾಡಿದ ಆಕ್ರಮಣಗಳಿಂದಲೂ ದೇಶದಲ್ಲಿದ್ದ ಧರ್ಮದ ಆಚರಣೆ ಹಾಗೂ ಮೂಢನಂಬಿಕೆಗಳಿಂದ ಮಹಿಳೆಯರು ನೊಂದು ಬೆಂದು ಹೋಗಿದ್ದರು. ಇಂತಹ ಸಂಧರ್ಭದಲ್ಲಿ ಗಾಂಧೀಜಿಯವರ ಆಗಮನವಾಯಿತು. ಈ ಆಗಮನ ಮಹಿಳೆಯರು ಹಂತ ಹಂತವಾಗಿ ಸುಧಾರಣೆಗೊಂಡು ಸ್ವಾತಂತ್ರ ಸಂಗ್ರಾಮದಲ್ಲಿ ಪಾಲ್ಗೊಳ್ಳಲು ಪ್ರಾರಂಬಿಸಿದರು. ಹೀಗೆ ಚಳುವಳಿಯಲ್ಲಿ ಭಾಗವಹಿಸಿದ ಮಹಿಳೆಯರಲ್ಲಿ ಅನೇಕರು ಕರ್ನಾಟಕದ ಮಹಿಳೆಯರೇ ಆಗಿದ್ದಾರೆ. ಇವರು ಹಲವಾರು ರೀತಿಯಲ್ಲಿ ಉಪವಾಸ ಸತ್ಯಾಗಳು ಹಾಗೂ ಚಳುವಳಿಗಳಲ್ಲಿ ಭಾಗವಹಿಸಿ ಅನೇಕ ರೀತಿಯ ಶಿಕ್ಷೆ ಹಾಗೂ ಸೆರೆಯನ್ನು ಅನುಭವಿಸಿರುವುದನ್ನು ನಾವು ಗಮನಿಸಬಹುದಾಗಿದೆ.

ಕರ್ನಾಟಕದಾದ್ಯಂತ ಕೊಡಗು, ಮೈಸೂರು, ಮಂಗಳೂರು, ಶಿರಸಿ, ಸಿದ್ದಾಪುರ, ಕುಂದಾಪುರ, ಅಂಕೋಲಾ, ಬೆಳಗಾವಿ ಹಾಗೂ ಉತ್ತರ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಮಹಿಳೆಯರು ಪುರುಷರಷ್ಟೇ ಉತ್ಸಾಹ ಭರಿತವಾಗಿ ಸ್ವಾತಂತ್ರ್ಯ ಸಂಗ್ರಮದಲ್ಲಿ ಪಾಲ್ಗೊಂಡು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸ್ವಾತಂತ್ರ ಸಂಗ್ರಾಮದಲ್ಲಿ ಪಾಲ್ಗೊಂಡು ಪುರುಷರಂತೆಯೇ ಹಲವು ರೀತಿಯ ಶಿಕ್ಷೆಯನ್ನು ಅನುಭವಿಸಿ ಸ್ವಾತಂತ್ರ್ಯಗಳಿಸುವಲ್ಲಿ ಮತ್ತು ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದುದ್ದನ್ನು ನೋಡಿದರೇ ಪುರುಷರಂತೆಯೇ ಶಿಕ್ಷೆಯನ್ನು ಅನುಭವಿಸಲು ಸಿದ್ದವಾಗಿದ್ದ ರೀತಿಯನ್ನು ಗಮನಿಸಿದರೆ ಅಂಗ ತಾರತಮ್ಯವಿದ್ದ ಆ ಕಾಲದಲ್ಲಿಯೂ ಸಹ ಮಹಿಳೆಯರ ಆಸಕ್ತಿ ಮತ್ತು ಶೌರ್ಯವು ಅಪಾರವಾಗಿತ್ತು.

ಮಹಿಳೆಯರ ಈ ಹುಮ್ಮಸ್ಸನ್ನು ಕಂಡ ಗಾಂಧೀಜಿಯವರು ಆಶ್ಚರ್ಯ ಹಾಗೂ ಆನಂದ ಭರಿತರಾಗಿದ್ದರು ಅವರು ಇನ್ನು ಹೆಚ್ಚು ಹೆಚ್ಚು ಉತ್ಸಾಹಿಯಾಗಿ ಭಾಷಣಗಳನ್ನು ಮಾಡ ತೊಡಗಿದ್ದರು. ಇಂತಹ ಭಾಷಣಗಳಿಂದ ಪ್ರೇರೇಪಿತರಾದ ಮಹಿಳೆಯರು ತಮ್ಮ ಮೈಮೇಲಿನ ಒಡವೆಗಳನ್ನು ಚಳುವಳಿಗೆ ದಾನವಾಗಿ ನೀಡತೊಡಗಿದರು. ತಮ್ಮ ಪತಿಯರೊಂದಿಗೆ ಚಳುವಳಿಗಳಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸ ತೊಡಗಿದರು ಹೀಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಭಾಗವಹಿಸಿದ ಮಹಿಳೆಯರಲ್ಲಿ ಕೊಡಗಿನ ಗೌರಮ್ಮ, ಮಂಗಳೂರಿನ ಆನಂದೀ ಬಾಯಿ, ಹುಬ್ಬಳ್ಳಿಯ ಶ್ರೀಮತಿ ನಾಗಮ್ಮ, ಪಾಟೀಲರು, ಕುಂದಾಪುರದ ಶ್ರೀಮತಿ ವಿಮಾಬಾಯಿ, ಬೆಂಗಳೂರಿನ ಶ್ರೀಮತಿ ಬಿ.ಕಾಮಾಕ್ಷಮ್ಮ, ನರಗುಂದದ ಶ್ರೀಮತಿ ಪದ್ಮಾಬಾಯಿ, ಮಾಗಡಿಯ ಶ್ರೀಮತಿ ಲೀಲಾವತಿ, ಸಿದ್ದಾಪುರದ ಶ್ರೀಮತಿ ಮಹಾದೇವಿ ತಾಯಿ, ಮೈಸೂರು ಸಂಸ್ಥಾನದ ಎಂ.ಎಸ್,ಜೋಯಿಸರ ಪತ್ನಿ ಸಾಬ್ಬಮ್ಮ ಜೋಯಿಸ್ ಗೌರಮ್ಮ, ವೆಂಕಟರಾಮಯ್ಯ, ಕಾವೇರಮ್ಮ ಮತ್ತು ಕಮಲಮ್ಮ ಬೆಂದೂರ್, ಸಾಗರದ ಕೆರೆಮನೆ ಲಕ್ಷ್ಮಮ್ಮ, ಸಿರಸಿಯ ಮಹಾಲಕ್ಷ್ಮಮ್ಮ, ಗದಿಗೆಪ್ಪಗೌಡನ ಪತ್ನಿ ಗೌರಮ್ಮ, ಅಂಕೋಲಾದ ಮಾಣಿದೇವಿ, ಅಂಕೋಲದ ಬೋಮ್ಮಕ್ಕ, ದೇವಿ ಮೊದಲಾ ಮಹಿಳೆಯರು ಮೊದಲಾದವರಾಗಿದ್ದಾರೆ.

**ಕೊಡಗಿನ ಗೌರಮ್ಮ:** ಗಾಂಧೀಜಿಯವರ ಕೊಡಗಿನ ಗುಂಡುಕುಟ್ಟಿಯಲ್ಲಿ ಗಂಗಿದ್ದ ಗಾಂಧೀಜಿಯವರನ್ನು ತಮ್ಮ ಮನೆಗೆ ಕರೆತರಬೇಕೆಂದು ಗೌರಮ್ಮರವರು ಆ ಊರಿನ ಸ್ವಾಗತ ಮಂಡಳಿಯನ್ನು ಕೇಳಿಕೊಂಡರು ಅದಕ್ಕೆ ಮಂಡಳಿಯು ಒಪ್ಪಂದೇ ಇದ್ದಾಗ ಗೌರಮ್ಮನವರು ಉಪವಾಸ ಮಾಡಿದರು. ಈ ಸುದ್ದಿ ಹೇಗೋ

ಗಾಂಧೀಜಿಯವರಿಗೆ ತಲುಪಿತು. ಗಾಂಧೀಜಿಯವರು ಇದ್ದಲ್ಲಿಗೆ ಬಂದ ಗೌರಮ್ಮನವರು ನೀವು ನಮ್ಮ ಮನೆಗೆ ಬರಲಿಲ್ಲವಲ್ಲ ಅದಕ್ಕೆ ಎಂದರು. ಅದಕ್ಕೆ ಗಾಂಧೀಜಿಯವರು ನೀನು ಉಪವಾಸ ನಿಲ್ಲಿಸಿದರೇ ಬರುತ್ತೇನೆ, ಎಂದು ಹೇಳಿ ತಮ್ಮ ಕೈಯಲ್ಲಿದ್ದ ಕಿತ್ತಳೆ ಹಣ್ಣನ್ನು ನೀಡಿದರು. ಆಗ ಗೌರಮ್ಮನವರು ನಿಮಗಾಗಿ ನಾನು ಒಡವೆಗಳನ್ನು ತೆಗೆದಿಟ್ಟದ್ದೇನೆ ಎಂದರು. ನಂತರ ಗಾಂಧೀಜಿಯವರು ಗೌರಮ್ಮನವರ ಮನೆಗೆ ಹೋಗಿ ಒಡವೆಗಳನ್ನು ನೀಡುವುದು ಗೌರಮ್ಮನವರು ಇಚ್ಚೆಯಾಗಿತ್ತು. ಇದಕ್ಕೆ ಅವರ ಪತಿಯ ಅನುಮತಿಯೂ ಇದ್ದತು. ಇವರಿಂ ಪ್ರೇರೇಪಿತಲಾದ ಮತ್ತೊಬ್ಬ ತರಾಣಿಯೂ ಸಗ ಗಾಂಧೀಜಿಯವರಿಗೆ. ತನ್ನ ಬಂಗಾರದ ಒಡವೆಗಳನ್ನು ನೀಡಿದಳು ಹೀಗೆ ಕೊಡಗಿನ ಗೌರಮ್ಮನವರು ಗಾಂಧೀಜಿಯವರು ಹೋರಾಟಕ್ಕೆ ಪರೋಕ್ಷವಾಗಿ ಭಾಗವಹಿಸಿದ್ದನ್ನು ಸ್ಮರಿಸಬಹುದು.

**ಮಂಗಳೂರಿನ ಆನಂದಿಬಾಯಿ :** ಮಂಗಳೂರಿನ ಮಹಿಳೆಯರ ಚಳುವಳಿಯ ಜೀವಾಳವಾದ ಶ್ರೀಮತಿ ಆನಂದಿ ಬಾಯಿ ರವರು ಮಹಿಳೆಯರನ್ನು ಸಂಘಟಿಸಿದ್ದರು ಗಾಂಧೀಜಿಯವರು ಮಹಿಳೆಯರ ಸಭೆಯಲ್ಲಿ ಭಾಗವಹಿಸಿದ್ದ ಸಂಧರ್ಭದಲ್ಲಿ ಹುಡುಗಿಯರು ಒಂದು ಮರಾಠಿ ಹಾಡನ್ನು ಹಾಸಿದರು ನಂತರ ಆನಂಧಿ ಬಾಯಿಯವರ ನೇತೃತ್ವದಲ್ಲಿ ಸಂಗ್ರಹಿಸಿದ್ದ 25 ರೂಪಾಯಿಗಳನ್ನು ನಿಧಿಯನ್ನಾಗಿ ಸಮರ್ಪಿಸಿದರು ನಂತರ ಆನಂದೀಬಾಯಿಯವರು ಹಿಂದಿಯಲ್ಲಿದ್ದ ಒಂದು ಬಿನ್ನವತ್ತಾಳೆಯನ್ನು ಓದಿದರು ಇದಕ್ಕೆ ಗಾಂಧೀಜಿಯವರು ಉತ್ತರಿಸುತ್ತಾ ನಾನು ಮಂಗಳೂರಿನ ಮಹಿಳೆಯರು ನಿಧಿ ಸಮರ್ಪಿಸುತ್ತಿರುವುದು ಇದೇ ಮೊದಲ ಬಾರಿಯಲ್ಲಿ. ಈ ಹಿಂದೆ ಎರಡು ಬಾರಿ ತಮ್ಮ ಒಡವೆಗಳನ್ನು ನೀಡುವುದರಲ್ಲಿ ಉದಾರತೆಯನ್ನು ತೋರಿದ್ದಾರೆ ಎಂದಿದ್ದಾರೆ ಹಾಗೆಯೇ ಮಹಿಳೆಯರು ಹೆಚ್ಚು ಹೆಚ್ಚು ನಿಧಿಯನ್ನು ಹರಿಜನೋದ್ಧಾರಕ್ಕಾಗಿ ಸಂಗ್ರಹ ಮಾಡಬೇಕೆಂದು ಹೇಳಿದರು ಈ ಕಾರ್ಯದಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚು ಸಮರ್ಥರು ಎಂದು ಹೇಳಿದರು.

**ಹುಬ್ಬಳ್ಳಿ ಶ್ರೀಮತಿ ನಾಗಮ್ಮ ಪಾಟೀಲರು :** 1934ರಲ್ಲಿ ಗಾಂಧೀಜಿಯವರು ಹರಿಜನ ಪ್ರವಾಸದಲ್ಲಿದ್ದರು ಆ ಸಂಧರ್ಭದಲ್ಲಿ ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿದ್ದ ಸರದಾರ ವೀರನಗೌಡ ಪಾಟೀಲರ ಪತ್ನಿಯಾಗಿದ್ದ ಶ್ರೀಮತಿ ನಾಗಮ್ಮ ಪಾಟೀಲರು ಗಾಂಧೀಜಿಯವರು ಆಗಮಿಸಿದ್ದ ಮೋಟಿ ಬೆನ್ನೂರಿಗೆ ಬಂದಿದ್ದರು. ಅಲ್ಲಿಯ ಕಾರ್ಯಕ್ರಮ ಮುಗಿಸಿ ಗಾಂಧೀಜಿಯವರೊಂದಿಗೆ ಪ್ರಯಾಣ ಮಾಡುತ್ತಿದ್ದ ಸಂಧರ್ಭದಲ್ಲಿ ಗಾಂಧೀಜಿಯವರು ಶ್ರೀಮತಿ ನಾಗಮ್ಮರವರನ್ನು ಕುರಿತು ಹೀಗೆ ಹೇಳಿದರು ನಿಮ್ಮ ಯಜಮಾನರು ಕರ್ನಾಟಕ ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿದ್ದಾರೆ ಎಂದು ಮೇಲೆ ನಿವೇಕೆ ಕೆಲವು ಹರಿಜನ ಹುಡುಗಿಯರನ್ನು ಮನೆಯಲ್ಲಿ ಏಕೆ ಜೋಪಾನ ಮಾಡಬಾರದು ಎಂದು ಹೇಳಿದರು ಇದನ್ನು ಕೇಳಿದ ನಾಗಮ್ಮರವರು ನಾನೇನು ಹೆಚ್ಚು ಕಲಿತವಳಲ್ಲ ನನಗೇನೂ ಬರುವುದಿಲ್ಲ ಎಂದರು ಅದಕ್ಕೆ ಗಾಂಧೀಜಿಯವರು ಹರಿಜನ ಮಕ್ಕಳ ಮೈ ತೊಳೆಯಲು ತಲೆ ಬಾಚಲು ಬಟ್ಟೆ ಒಗೆಯಲು ಇತ್ಯಾದಿ ಸ್ವಚ್ಛತೆಯ ಕೆಲಸವಾದರು ಬರುವುದೋ ಇಲ್ಲವೋ ಎಂದು ಕೇಳಿದರು ಅದಕ್ಕೆ ನಾಗಮ್ಮರವರು ಇದೇನು ದೊಡ್ಡ ಕೆಲಸ ಇಷ್ಟನ್ನು ಯಾರಾದರೂ ಮಾಡಬಹುದು ಎಂದರು ಹಾಗಾದರೇ ನಿಮ್ಮ ಮಕ್ಕಳಂತೆ ಇಬ್ಬರು ಹುಡುಗಿಯರನ್ನು ಘೋಷಿಸು ಎಂದು ಹೇಳಿದರು. ಇದೇ ರಾಮವಚನವೆಂದು ತಿಳಿದ ನಾಗಮ್ಮರವರು

ತಾರಾ, ಮಧುರಾ ಎಂಬ ಹುಡುಗಿಯರನ್ನು ಅವರ ಸ್ವಂತ ಮಕ್ಕಳಂತೆ ಜೊತೆಗೆ ಸಾಕಲು ಪ್ರಾರಂಭಿಸಿದರು ಅಂದಿನಿಂದ ಸುಮಾರು 34 ರಿಂದ 35 ವರ್ಷಗಳ ಕಾಲ ಶ್ರೀಮತಿ ನಾಗಮ್ಮರವರು ಹಾಗೂ ಅವರ ಪತಿ ವೀರನಗೌಡ ಪಾಟೀಲರು ಹಿಂದುಳಿದವರ ಸೇವಾ ಕಾರ್ಯದಲ್ಲಿ ತೊಡಗಿಕೊಂಡಿದ್ದೇವೆಂದು ಅವರ ನೆನಪುಗಳಲ್ಲಿ ಹೇಳಿಕೊಂಡಿದ್ದಾರೆ. ಇವರು ಗಾಂಧೀಜಿಯವರ ಸೇವಾದೀಕ್ಷೆಯಿಂದ ಪ್ರಭಾವಿತರಾಗಿ ಹುಬ್ಬಳಿಯಲ್ಲಿ ಹಿಜನ ಬಾಲಿಕಾಶ್ರಮವನ್ನು ಪ್ರಾರಂಭಿಸಿದರು ಇದು ಮುಂದುವರಿದು ಹುಬ್ಬಳಿ ಮಹಿಳಾ ವಿದ್ಯಾಪೀಠವಾಗಿ ವಿಕಾಶಗೊಂಡಿದೆ ಎಂದು ತಿಳಿದು ಬಂದಿದೆ.

**ಶ್ರೀಮತಿ ವಿಮಲಾ ಬಾಯಿ ಕುಂದಾಪುರ ಹುಬ್ಬಳಿ:** ಶ್ರೀಮತಿ ವಿಮಲಾ ಬಾಯಿಯವರು ಗಾಂಧೀಜಿಯವರೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದು ಇವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವಯಂ ಸೇವಿಕೆಯರ ಜವಾಬ್ದಾರಿಯನ್ನು ಹೊತ್ತು ಬಹಳ ಅಚ್ಚುಕಟ್ಟಾಗಿ ಕತವ್ಯವನ್ನು ನಿರ್ವಹಿಸುತ್ತಿದ್ದರು. ನಂತರ 1932ರ ಇಸವಿಯಲ್ಲಿ ಯರವಾಡ ಜೈಲಿಗೂ ಹೋಗಿ ಬಂದಿದ್ದರು. 1946ರಲ್ಲಿ ಕಸ್ತೂರ ಬಾ ಟ್ರಸ್ಟಿನ ಕರ್ನಾಟಕ ಪ್ರಾಂತಿಯ ಶಾಖೆಯ ಪ್ರತಿನಿದಿತ್ವವನ್ನು ವಹಿಸಿಕೊಂಡು ಸುಮಾರು 17 ವರ್ಷಗಳ ಕಾಲ ಅದರ ಜವಾಬ್ದಾರಿಯನ್ನು ನಿಭಾಯಿಸಿದರು ಇಷ್ಟೇ ಅಲ್ಲದೆ ಶ್ರೀಮತಿ ವಿಮಾಬಾಯಿಯವರು ಹುಬ್ಬಳ್ಳಿಯ ಭಗಿನಿಮಂಡಲ, ಕರ್ನಾಟಕ ಭಗಿನಿಮಂಡಲ, ಹಿಂದೂಸ್ತಾನಿ ಸೇವಾದಳ, ರಾಷ್ಟ್ರೀಯ ಟಳಕ ಕನ್ಯಾ ಶಾಳೆ ಹುಬ್ಬಳ್ಳಿ, ಹುಬ್ಬಳ್ಳಿ ಪ್ರಸೂತಿ ಗೃಹ, ಹುಬ್ಬಳ್ಳಿ ಶಿಶುವಿಹಾರ, ಹುಬ್ಬಳ್ಳಿ ಚೈಲ್ಡ್‌ವೆಲ್ಫೆರ್ ಸೆಂಟರ್ ಮುಂಬಯಿ ಪ್ರಂತಿಕ ಅಡಲ್ಟ್ ಎಜುಕೇಷನ್ ಬೋರ್ಡ್ ಮತ್ತು ಕಾಂಗ್ರೇಸ್ ಸಂಸ್ಥೆ ಮುಂತಾದ ಸ್ಥಳಗಳಲ್ಲಿ ಕೆಲಸ ಮಾಡುತ್ತಾ ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದರು.

**ಶ್ರೀಮತಿ ಕಾಮಾಕ್ಷಮ್ಮ :** ಸುಮಾರು 17 ವರ್ಷಗಳ ಹಿಂದೆ ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದ ಬಗ್ಗೆ ಪತ್ರಿಕೆಯಲ್ಲಿ ಓದಿದ್ದ ಇವರು ಅಂದೇ ಸ್ವಾತಂತ್ರ ಸಂಗ್ರಮದ ಬಗ್ಗೆ ಉತ್ಸುಕರಾಗಿದ್ದರು. ನಂತರದ ದಿನಗಳಲ್ಲಿ ಪಾವಗಡ ಎಂಬ ತಾಲ್ಲೂಕಿನಲ್ಲಿ ಉಮಾಬಾಯಿ ಕುಂದಾಪುರರವರ ಭಾಷಣ ಕೇಳಿ ಇನ್ನೂ ಪುಳಕಿತರಾಗುತ್ತಾರೆ. ಆನಂತರ ಗಾಂಧೀಜಿಯವರನ್ನು ನೋಡಲೇಬೇಕು ಎಂಬ ಹಂಬಲ ಅವರಲ್ಲಿ ಉಂಟಾಯಿತು. ನಂತರ ಮಹಾತ್ಮ ಗಾಂಧೀಜಿಯವರು ಬೆಂಗಳೂರಿಗೆ ಬಂದಿದ್ದ ಸುದ್ದಿ ತಿಳಿದ ಇವರು ಧಾವಿಸಿ ಬಂದು ಗಾಂಧೀಜಿಯವರನ್ನು ಭೇಟಿ ಮಾಡಿ ಆನಂದನಭರಿತರಾಗುತ್ತಾರೆ. ನಂತರ ಎರಡನೇ ಬಾರಿ ಗಾಂಧೀಜಿಯವರನ್ನು ಬೇಟಿ ಮಾಡಿದ ಸಂದರ್ಭದಲ್ಲಿ ಮಹಾತ್ಮರ ಕೈಯಿಂದ ಹಿಂದೀ ಪರೀಕ್ಷೆಯ ಪ್ರಮಾಣಪತ್ರ ಪಡೆದು ಅವರ ಭಾಷಣವನ್ನು ಕೇಳಿ ಪುಳಕಿತರಾಗುತ್ತಾರೆ. ಗಾಂಧೀಜಿಯವರು ತಮ್ಮ ಭಾಚಣದಲ್ಲಿ "ಇಲ್ಲಿ ಪ್ರಮಾಣ ಪತ್ರ ಪಡೆದಿರುವವರಲ್ಲಿ ಮಹಿಳೆಯರದೇ ಸಂಖ್ಯೆ ಹೆಚ್ಚಾಗಿದೆ. ಯಾವ ಕೆಲಸದಲ್ಲಿ ಅವರು ತೊಡಗುವರೋ ಅದಕ್ಕೆ ಉಜ್ವಲ ಭವಿಷ್ಯ ಉಂಟು ಸ್ವಾತಂತ್ರ್ಯದ ಸಂಗ್ರಾಮಕ್ಕೆ ಮಹಿಳೆಯರ ನೆರವು ಹೆಚ್ಚಾಗಿ ಬೇಕಾಗಿದೆ" ಎಂಬುದಾಗಿ ಹೇಳಿದರು. ಈ ಮಾತು ಕಾಮಾಕ್ಷಮ್ಮರವರ ಕಿವಿಯಲ್ಲಿ ಮೊಳಗುತ್ತಿತ್ತು ಎಂಬುದಾಗಿ ಅವರ ಹೇಳಿಕೊಂಡಿದ್ದಾರೆ. ಆ ನಂತರ ಅವರ ಶಕ್ತಿಗೆ ಚಾಲನೆ ದೊರೆತು ಅವರಲ್ಲಿ ಚೈತನ್ಯ ಉಂಟಾಯಿತು. ಎಂದು ಹೇಳಿಕೊಂಡಿದ್ದಾರೆ. 1942ರ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಅವರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ಮೊದಲಿಗೆ ಹಿಂದೀ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡು ಅವರು ಕಟ್ಟಡ ಕಲ್ಲಚ್ಚಿನಲ್ಲಿ ಗುಟ್ಟಾಗಿ ತಯಾರಿಸಿ ಕೊಡುತ್ತಾ ಹಸ್ತ ಪತ್ರಿಕೆ ಸಾಕಷ್ಟಿದ್ದರೂ ಸಹ ಪೋಲಿಸಿನವರ ಜೊತೆ ಜೊತೆಯಲ್ಲಿ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದರೂ ಸಹ ಅವರಿಗೆ ಅನುಮಾನ ಬರುತ್ತಿರಲಿಲ್ಲ ಅಲ್ಲದೆ ಚಿಕಕಪುಟ್ಟ ಸಭೆಗಳಲ್ಲಿ ರಾಷ್ಟೀಯ ಧ್ವಜವನ್ನು ಹಾರಿಸುವ ಕೆಲಸವನ್ನು ಸಹ ವಹಿಸಿಕೊಂಡಿದ್ದರು ಜೈಲಿಗೆ ಹೋಗುವ ಪ್ರಸಂಗ ಬಂದಾಗ ತಪ್ಪಿಸಿಕೊಳ್ಳುತ್ತಿದ್ದರು. ಆದರೆ ಒಮ್ಮೆ ಮುಂಬೈಯಿಂದ ಬಿಳಿ ಬೋರಿವಿಲಿ ಎಂಬಲ್ಲಿ ಮಹಿಳಾ ಶಿಬಿರ ನಡೆದ ಸಂದರ್ಭದಲ್ಲಿ ತಾಯಿಯ ಮಮತೆಯ ಬಂಧನವನ್ನು ಬಿಡಿಸಿಕೊಂಡು ತಂದೆಯ ಕೋಪಕ್ಕೆ ತುತ್ತಾಗಿ ಶಿಭಿರವಾಸಿಯಾಗಿ ಮಹಿಳೆಯರ ಉದ್ದಾರಕ್ಕೆ ಮುಡಿಪಾಗಿ ಅಂದಿನಿಂದ ಆಶ್ರಮವಾಸಿಯಾಗಿ ಆ ಮೂಲಕ ಸ್ವಾತಂತ್ರ್ಯ ಸಂಗ್ರಾಮವಾದ ಕಾಯಕವನ್ನು ತೊಡಗಿಸಿಕೊಂಡರೆಂದು ಅವರು ತಮ್ಮ ನೆನಹುಗಳನ್ನು ಹೇಳಿಕೊಂಡಿದ್ದಾರೆ.

**ಶ್ರೀಮತಿ ಪದ್ಮಾಬಾಯಿರವರು :** ಸೇವಾಶ್ರಮದಲ್ಲಿ ಉಳಿದುಕೊಂಡು ನೂಲುವುದು ಅಂಜಿ ತಯಾರಿಸುವುದು, ಹತ್ತಿಯನ್ನು ಶುದ್ಧ ಮಾಡುವುದು ಮೊದಲಾದ ಕೆಲಸಗಳನ್ನು ಮಾಡುತ್ತಿದ್ದರು. ಗಾಂಧೀಜಿಯವರು ಅವರ ಎಪ್ಪತ್ತನೇಯ ಜನ್ಮದಿನದ ದಿನಾಚರಣೆಗೆ ಸ್ವಂತಹ ಕೈಯಿಂದಲ್ಲೇ ಮಹಾತ್ಮ ಗಾಂಧೀಜಿಯವರಿಗೆ ಮತ್ತು ಕಸ್ತೂರ ಬಾ ರವರಿಗೆ ಕೈ ನೂಲಿನ ಬಟ್ಟೆಗಳನ್ನು ತಯಾರಿಸಿದ್ದರು ಹಾಗೇಯೇ;

**ಶ್ರೀಮತಿ ಸಿದ್ದಮ್ಮ ಮೈಲಾರರವರು** ತಮ್ಮ ಪತಿಯ ಜೊತೆ ಸೇರಿ ಸ್ವತಂತ್ರ್ಯ ಸಂಗ್ರಾಮದ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಗಾಂಧೀಜಿಯವರ ಸೂಚನೆಯಂತೆ ಗ್ರಾಮೋದ್ಧಾರ ದೀಕ್ಷೆಯನ್ನು ಪಡೆದು ಕೆಲಸ ಮಾಡ ಕೂಡಗಿದ್ದರು ಈ ನಡುವೆ ಗಾಂಧೀಜಿಯವರ ಆದೇಶದಂತೆ 'ಮಾಡು ಇಲ್ಲವೇ ಮಾಡಿ' ಚಳುವಳಿಯಲ್ಲಿ ಸಕ್ರೀಯವಾಗಿದ್ದ ಮಹದೇವ ಮೈಲಾರರವರು ಪ್ರಾಣತೆತ್ತರು ಆ ನಂತರವು ಶ್ರೀಮತಿ ಸಿದ್ದಮ್ಮರವರು ವಿಚಲಿತರಾಗದೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು.

**ಶ್ರೀಮತಿ ಲೀಲಾವತಿ ಮಾಗಡಿ** ಇವರು ಸಹ ಸ್ವತಂತ್ರ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು ಎಂದು ಅವರ ನೆನಪುಗಳಲಲಿ ಹೇಳಿಕೊಂಡಿದ್ದಾರೆ ಗಾಂಧೀಜಿಯವರು ಬೆಳಗಾವಿಯ ಬೇಟಿಯ ಸಮಯದಲ್ಲಿ ಅಂದಿನ ಹರಿಜನ ಸೇವಕ ಸಂಘದ ಅಧ್ಯಕ್ಷರಾದ ನನ್ನ ತಂದೆ ತಾಯಿಯ ಜೊತೆಯಲ್ಲಿ ಸ್ವತಂತ್ರ ಸಂಗ್ರಾಮದ ಸೇವೆಯಲ್ಲಿ ತೊಡಗಿಸಿಕೊಂಡು ಸೇವಾಶ್ರಮಕ್ಕೆ ಹೋಗುತ್ತಿದ್ದೆ ಎಂದು 1942ರಲ್ಲಿ ಬಾಪುರವರು ನಿಕಟ ಸಂದರ್ಶನವಾಯಿತು. ನನ್ನ ರಜೆಯನ್ನು ಸೇವಾಶ್ರಮದಲ್ಲಿ ಕಳೆಯಲು ತೆರಳಿದ್ದೆನು ಅದೇ ಕೊನೆಯ ಸಂದರ್ಶನವಾಯಿತು ಎಂದು ಹೇಳಿಕೊಂಡಿದ್ದಾರೆ.

**ಶ್ರೀಮತಿ ಮಹದೇವಿ ತಾಯಿಯವರು** ಗಾಂಧೀಜಿಯವರ ಪ್ರಭಾವಕ್ಕೆ ಬಳಗದ ಇವರು ಸ್ವತಂತ್ರ ಆಂದೋಲನದಲ್ಲಿ ಪಿಕೆಟಿಂಗ್ ಮಾಡಿ ಪ್ರಚಾರ ಮಾಡಿ ಕರನಿರಾಕರಣೆಯಲ್ಲಿ ಭಾಗವಹಿಸಿ 1933ರ ಹೊತ್ತಿಗೆ ಎರಡು ಮೂರು ಸಲ ಸೆರೆ ಮನೆಗೆ ಹೋಗಿ ಬಂದಿದ್ದರೆಂದೂ ಸೆರೆಮನೆಯಲ್ಲಿ ಇತರ ಮಹಿಳೆಯರಿಗೆ ಸೆರೆಮನೆಯಲ್ಲಿ ಆಗುತ್ತಿದ್ದ ಅನ್ಯಾಯಗಳನ್ನು ಪ್ರತಿಭಟಿಸಿ ಸೆರೆಮನೆಯಲ್ಲಿಯೇ ಸುಮಾರು 18 ದಿನಗಳ ಉಪವಾಸ ಸತ್ಯಾಗ್ರಹ ಮೂಡಿದ್ದರೆಂದು ಹೇಳಿಕೊಂಡಿದ್ದಾರೆ. ಇವರ ಹೋರಾಟಗಳ ಬಗ್ಗೆ ತಿಳಿದ ಗಾಂಧೀಜಿಯವರು ವಾದ್ರಗೆ ಕರೆಸಿಕೊಂಡು ನೀನೊಬ್ಬ ಕರ್ತವ್ಯ ಶಾಲಿ ಕಾರ್ಯಕರ್ತೆ ಆಗಬಲ್ಲೆ ಆದ್ದರಿಂದ

ಹಿಂದಿ ಕಲಿಯಬೇಕೆಂದು ಹೇಳಿದ್ದರೆಂದು ಅವರು ಹೇಳಿಕೊಂಡಿರುತ್ತಾರೆ. ಅಷ್ಟೇ ಅಲ್ಲದೇ, ಗಾಂಧೀಜಿ ಹರಿಜನರನ್ನು ಎತ್ತಿ ಹಿಡಿಯುವುದು ಮುಖ್ಯಕಾರ್ಯಗಳಲ್ಲಿ ಒಂದಾಗಿತ್ತು. ಎಂಬುದನ್ನು ತಿಳಿಸಿದ ಮಹದೇವ ತಾಯಿಯವರು ಡೆಹರಾಡೂನಿನಿಂದ ಒಬ್ಬ ಹರಿಜನ ಬಾಲಿಕೆಯನ್ನು ಅವರ ಜೊತೆಗೆ ಇಟ್ಟುಕೊಳ್ಳಲು ಕರೆದುಕೊಂಡು ಹೋಗಿದ್ದರು ಅವಳನ್ನು ವಾರ್ದಾದಲ್ಲಿ ಅವರ ಬಳಿಯೇ ಇಟ್ಟುಕೊಂಡಿದ್ದರು. ಆದರೇ ಅಪ್ಪಟ ಕರ್ಮ ಬ್ರಾಹ್ಮಣ ಮನೆತನದ ಸ್ತ್ರೀ ಯಾಗಿದ್ದೆ ಇವರನ್ನು ಇವರ ಮನರಯವರು ಹರಿಜನ ಹೆಣ್ಣುಮಗಳೊಂದಿಎ ಮನೆಗೆ ಬರುವುದನ್ನು ನಿರಾಕರಿಸಿದರು ಆದರೇ ಶ್ರೀಮತಿ ಮಹಾದೇವಿ ತಾಯಿಯವರು ಹರಿಜನ ಹೆಣ್ಣು ಮಗಳನ್ನು ಜೋಕೆ ಮಾಡಲು ಸಿದ್ದರಾಗಿದ್ದರು. ಇದನ್ನು ತಿಳಿದ ಗಾಂಧೀಜಿಯವರು ಆನಂದ ಭರಿತರಾಗಿದ್ದರು. ಗಾಂಧೀಜಿಯವರು ಮಹಾದೇವಿ ತಾಯಿಯವರನ್ನು ಕುರಿತು ನಿನ್ನ ಮನೆಯವರು ನಿನ್ನ ಮತ್ತು ಹರಿಜನ ಕನ್ಯೆಯಲ್ಲಿ ಯಾವುದೇ ಬೇಧವನ್ನು ಎಣಿಸದೆ. ಮನೆಗೆ ಕರೆದರೆ ಮಾತ್ರ ಹೋಗು ಎಂದು ಹೇಳಿದ್ದರು ಆದ್ದರಿಂದ 8ವರ್ಷಗಳ ಕಾಲ ಮನೆಗೆ ಹೋಗಲಿಲ್ಲಿವೆಂದು ಹೇಳಿಕೊಂಡಿದ್ದಾರೆ. ನಂತರ 8 ವರ್ಷಗಳ ತರುವಾಯ ಇವರ ತಂದೆಯವರು ಮನೆಗೆ ಬರುಲು ಒಪ್ಪಿಗೆ ನೀಡಿದರು ಅದೂ ಹರಿಜನ ಕನ್ಯೆಯೊಡನೆ ಎಂದೂ ಮನೆಗೆ ಹೋದ ಸಂದರ್ಭದಲ್ಲಿ ಹರಿಜನ ಕನ್ಯೆಗೂ ನನಗೂ ಯಾವುದೇ ತಾರತಮ್ಯ ಮಾಡಲಿಲ್ಲವೆಂದು ಹೇಳಿಕೊಂಡಿದ್ದಾರೆ. ಗಾಂಧೀಜಿಯವರ ಪ್ರಭಾವದಿಂದ ನಾನು ಕೊನೆಯವರೆಗೂ ವಿನೋಭಾಜಿಯ ಆಪ್ತಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೇನೆ ಎಂದು ತಮ್ಮ ನೆನಹುಗಳಲ್ಲಿ ಹೇಳಿಕೊಂಡಿದ್ದಾರೆ.

ಇನ್ನು ಸಿರಸಿ ಸಿದ್ದಾಪುರದಲ್ಲಿ ಮಹಿಳೆಯರು ಸ್ವಾತಂತ್ರ ಚಳುವಳಿಯಲ್ಲಿ ಬಹಳವಾಗಿ ಭಾಗವಹಿಸಿದನ್ನು ನೋಡಬಹುದಾಗಿದೆ. ಮೈಸೂರಿನವರಾದ ಎಂ.ಎನ್.ಜೋಯಿಸರು ಸ್ವಾತಂತ್ರ್ಯ ಕಾರ್ಯದ ಜವಾಬ್ದಾರಿಯಿಂದ ಸಿರಸಿ ಸಿದ್ದಾಪುರಕ್ಕೆ ಹೊರಟ ಸಂಧರ್ಭದಲ್ಲಿ ಅವರ ಪತ್ನಿಯಾದ ಸುಬ್ಬಮ್ಮ ಜೋಯಿಸ್‌ರವರು ಸಹ ಹೊರಡುತ್ತಾರೆ. ನಂತರ ಸುಬ್ಬಮ್ಮ ಜೋಯಿಸ್, ಗೌರಮ್ಮ ವೆಂಕಟರಾಮಯ್ಯ, ಕಾವೇರಮ್ಮ ಮತ್ತು ಕಮಲಮ್ಮ, ಬೆಂದೂರ್ ಮುಂತಾದವರು ಮಹಿಳಾ ಸಂಘಟನೆ ಕಾರ್ಯದಲ್ಲಿ ತೊಡಗಿದರು ಅಲ್ಲದೇ ವಿಧವೆಯಾದ ಲಕ್ಷ್ಮಮ್ಮರವರು ಸಹ ಪರೋಕ್ಷವಾಗಿ ಚಳುವಳಿಯಲ್ಲಿ ಭಾಗವಹಿಸಿದ್ದರು.

ಮತ್ತೊಂದು ಘಟನೆಯಲ್ಲಿ ಸಿರಸಿ ಸಿದ್ದಾಪುರಗಳಲ್ಲಿ ನಡೆಯುತ್ತಿದ್ದ ಚಳುವಳಿಯ ಪರಿಣಾಮವಾಗಿ ಸುಮಾರು ಆರಾಜಿನ ಪುರುಷರು ಜೈಲಿಗೆ ಹೋಗಿದ್ದರು. ಈ ಜೈಲಿಗೆ ಹೋದವರ ಮನೆಯಲ್ಲಿ ಇದ್ದ ಹೆಂಗಸರು ಮಕ್ಕಳಿಗೆ ಪೋಲಿಸಿನವರು ಕಿರುಕುಳ ನೀಡುತ್ತಿದ್ದರು ಜಮೀನಿನ ಕಂದಾಯ ಕೊಡದೇ ಇದ್ದುದ್ದರಿಂದ ಅವರ ಮನೆಗಳನ್ನು ಜಪ್ತಿಮಾಡಿ, ಎಮ್ಮೆ, ದನ, ಪಾತ್ರೆ ಮುಂತಾದವುಗಳನ್ನು ಹರಾಜು ಹಾಕುತ್ತಿದ್ದರು. ಎಷ್ಟೋ ಸಂಧರ್ಭಗಳಲ್ಲಿ ಊಟಕ್ಕಾಗಿ ಇಟ್ಟುಕೊಂಡಿದ್ದ ಹತ್ತಾರು ಸೇರು ಅಕ್ಕಿಯನ್ನು ಸಹ ಪೋಲಿಸರು ತೆಗೆದುಕೊಂಡು ಹೋಗುತ್ತಿದ್ದರು. ಹರಾಜಿನಲ್ಲಿ ಹೆಚ್ಚು ಜನ ಕೊಂಡುಕೊಳ್ಳಲು ಮುಂದೆ ಬರುತ್ತಿರಲಿಲ್ಲ ಆದ್ದರಿಂದ ಪೋಲಿಸ್‌ನವರು ತಮಗೆ ಇಷ್ಟಬಂದವರಿಗೆ ಮಾರಾಟ ಮಾಡುತ್ತಿದ್ದರು. ಇಂತಹ ಅಧಿಕಾರಿಗಳ ಕೆಲಸ ನಡೆಯದಂತೆ ಒಂದು ಕಾರ್ಯಕ್ರಮ ಹಾಕಿಕೊಳ್ಳ ಬೇಕಾಯಿತು. ಅದಕ್ಕಾಗಿ ಒಂದು ಸತ್ಯಾಗ್ರಹವನ್ನು ಹೆಣ್ಣು ಮಕ್ಕಳ ಮೂಲಕ ಸಂಘಟಿಸಲು ತೀರ್ಮಾನಿಸಲಾಯಿತು. ಈ ಸಮಯದಲ್ಲಿ

ಮೈಸೂರು ಸಂಸ್ಥಾನದಿಂದ ಗೌರಮ್ಮ ವೆಂಕಟರಾಮಯ್ಯ, ಕಾವೇರಮ್ಮ, ಕಮಲಮ್ಮ ಬೆಂದೂರ್ ಮತ್ತು ಸುಬ್ಬಮ್ಮ ಜೋಯಿಸ್ ಇವರುಗಳು ಚಳುವಳಿಯಲ್ಲಿ ಭಾಗವಹಿಸಲು ಬಂದಿದ್ದರು ಚಳುವಳಿಯಲ್ಲಿ ಸ್ಥಳೀಯ ಹೆಂಗಸರು ಭಾಗವಹಿಸಲು ಬೇಕಾದ ಸಂಘಟನೆಗಳನ್ನು ಸ್ಥಳೀಯರು ನಡೆಸುತ್ತಿದ್ದರು. ಬಹಳಷ್ಟು ಹೆಂಗಸರು ಚಳುವಳಿಯಲ್ಲಿ ಭಾಗವಹಿಸಲು ಕಾತರರಾಗಿದ್ದರು. ಹೀಗಾಗಿ ಹೆಂಗಸರು ತಂಡೋಪ ತಂಡವಾಗಿ ಹರಾಜಿನಲ್ಲಿ ಮಾಲನ್ನು ಕೊಂಡವರ ಮನೆಯ ಮುಂದೆ ರಾಮಭಜನೆ ಮಾಡುತ್ತಾ ಆ ಮನೆಯವರ ಮನಸ್ಸನ್ನು ಪರಿವರ್ತಿಸುವಂತೆ ದೇವರಲ್ಲಿ ಪ್ರಾರ್ಥಿಸುವುದು ಅವರು ಮೂಲನ್ನು ಹಿಂತಿರುಗಿಸಿದರೆ, ಸತ್ಯಾಗ್ರಹವನ್ನು ನಿಲ್ಲಿಸುವುದು ಎಂದು ತೀರ್ಮಾನಿಸಿಕೊಂಡರು ಒಂದು ವೇಳೆ ಈ ರೀತಿಯ ಸತ್ಯಾಗ್ರಹ ನಡೆಯುವಾಗ ಸತ್ಯಾಗ್ರಹಿಗಳ ಮೇಲೆ ಅತ್ಯಾಚಾರ ನಡೆಯುವ ಪ್ರಸಂಗ ಬಂದರೆ ಆತ್ಮ ರಕ್ಷಣೆಗಾಗಿ ಒಬ್ಬೊಬ್ಬ ಸ್ತ್ರೀ ಸತ್ಯಾಗ್ರಹಿಯೂ ಒಂದು ಚೂರಿಯನ್ನು ಒಟ್ಟುಕೊಳ್ಳುವುದು ಅಂತಹ ಸಂಧರ್ಭ ಒದಗಿದರೇ ಆ ಚೂರಿಯಿಂದ  ತಾನೇ ಇಂದುಕೊಂಡು ಮಾನ ರಕ್ಷಣೆಮಾಡಿ ಕೊಳ್ಳುವುದು ಎಂದು ತೀರ್ಮಾನಿಸಿಕೊಂಡರು ಮೊದ ಮೊದಲು ಸ್ತ್ರೀಯರು ಮುಂದೆ ಬರಲು ಹಿಂಜರಿದರು ಒಂದು ಘಟನೆಯ ನಂತರ ಎಲ್ಲರೂ ಉತ್ಸಾಹಿಗಳಾಗಿ ಭಾಗವಹಿಸಿಸಲು ಪ್ರಾರಂಭಿಸಿದರು. ಹೆಜ್ಜೆ ಎಂಬ ಊರಿನಲ್ಲಿ ರಾಮಪ್ಪ ಎಂಬುವವನು ಸತ್ಯಾಗ್ರಹಿಗಳ ಎಮ್ಮೆ ಕೊಂಡುಕೊಂಡಿದ್ದೆ ಅವನ ಮನೆಯ ಮುಂದೆ ಘೌರಮ್ಮ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಇದನ್ನಾ ಹತ್ತಿಕ್ಕಲು ಪೋಲೀಸ್‌ನವರು ಗೌರಮ್ಮನವರ ಜೂಟ್ಟು ಹಿಡಿದು ರಸ್ತೆಯಲ್ಲಿ ಎಳೆದಾಡಿಕೊಂಡು ಬೂಟು ಕಾಲಿನಿಂದ ಆಗಾಗ್ಗೆ ಬಡಿಯುತ್ತಾ ಸ್ಟೇಷನ್‌ಗೆ ಕರೆದುಕೊಂಡು ಹೋದರು. ಈ ದೃಶ್ಯವನ್ನು ಅನೇಕ ಹೆಂಗಸರು ನೋಡಿದರು. ಮನಸ್ಸಿನಲ್ಲಿ ಈ ಅನ್ಯಾಯವನ್ನು ಹತ್ತಿಕ್ಕ ಬೇಕೆಂಬ ಉದ್ವೇಗ ಮೂಡಿತು. ಆದರೇ ಪೋಲಿಸ್‌ನವರು ಬೇರೆ ರೀತಿಯಲ್ಲಿ ಭಾವಿಸಿದ್ದರು. ಹೀಗೆ ಮಾಡುವುದರಿಂದ ಮಹಿಳಾ ಸತ್ಯಾಗ್ರಹಿಗಳನ್ನು ಹತ್ತಿಕ್ಕ ಬಹುದು ಎಂಬುದು ಇತರ ಭಾವನೆಯಾಗಿತ್ತು. ಆದರೆ ಆಗಾಗಲಿಲ್ಲ. ಹೆಚ್ಚು ಹೆಚ್ಚು ಮಹಿಳೆಯರು ಸತ್ಯಾಗ್ರಹ ಶಿಭಿರವನ್ನು ಸೇರಿದರು. ಸತ್ಯಾಗ್ರಹ ಮೂಡಿದ್ದಕ್ಕಾಗಿ ಕೋರ್ಟಿನವರು ಗೌರಮ್ಮನವರಿಗೆ 6 ತಿಂಗಳ ಸೆರೆವಾಸ ಶಿಕ್ಷೆಯನ್ನು ವಿದಿಸಿದರು. ರಾಮಪ್ಪ ಎಂಬುವವನು ತಾನು ಕೊಂಡಿದ್ದ ಎಮ್ಮೆಗಳನ್ನು ಹಿಂತಿರುಗಿಸಿ ಇನ್ನು ಮೇಲೆ ಈ ಕಾರ್ಯ ಮಾಡುವುದಿಲ್ಲವೆಂದು ಪ್ರಮಾಣ ಮಾಡಿದನು. ಮಾವನ ಗುಂಡಿಯಲ್ಲಿ ಫಕೀರಪ್ಪ ಎಂಬುವವನು ಸತ್ಯಾಗ್ರಹಿ ಗಳ ಮನೆಯಲ್ಲಿ ಜಪ್ತಿಮಾಡಲಾಗಿದ್ದ ಪಾತ್ರೆ ಪಾದಾರ್ಥಗಳನ್ನು ಕೊಂಡು ಅವನ ಮನೆಯ ಮುಂದೆ ದೊಟ್ಟ ಮನೆ ಮಹದೇವಮ್ಮನ ನೇತೃತ್ವದಲ್ಲಿ ಉಪವಾಸ ಸತ್ಯಾಗ್ರಹ ನಡೆಯಿತು. ಇಲ್ಲ ಪೋಲೀಸರು ಸತ್ಯಾಗ್ರಹಿಗಳ ಗೂಡೆವೆಗೇ ಬರಲಿಲ್ಲ, ಸುಮಾರು ಇಪ್ಪತ್ತೊಂಬತ್ತು ದಿವಸ ಉಪವಾಸ ಸತ್ಯಾಗ್ರಹ ನೆಡಯಿತು. ತಹಶೀಲ್ದಾರರಿಗೆ ಉಪವಾಸ ಮಾಡಿದ ಸತ್ಯಾಗ್ರಹಿಗಳು ಒಂದು ವೇಳೆ ಸತ್ತರೆ ಪರಿಸ್ಥಿತಿಯು ವಿಕೋಪಕ್ಕೆ ಹೋಗಬಹುದೆಂಬ ಭೀತಿ ಉಂಟಾಯಿತು. ಆದ್ದರಿಂದ ವೈದ್ಯರನ್ನು ಪರೀಕ್ಷೆ ಮಾಡಿಸಿದರು ಇನ್ನು ಒಂದೆರಡು ದಿನಗಳು ಹೀಗೆ ಮುಂದುವರಿದರೆ ಸತ್ತು ಹೋಗುತ್ತಾರೆಂದು ವೃದ್ಯರು ಹೇಳಿದರು. ಇದರಿಂದ ಬೀತಿ ಗೊಂಡ ಮನೆ ಮಾಲಿಕ ಪೋಲೀಸ್‌ನವರಿಗೆ ಗೊತ್ತಿಲ್ಲದಂತೆ ಎಲ್ಲಾ ಸಾಮಾನುಗಳನ್ನು ಸತ್ಯಾಗ್ರಹಿಗಳಿಗೆ ಒಪ್ಪಿಸಿದ್ದನು. ನಂತರ 31ನೇ ದಿನ ಸತ್ಯಾಗ್ರಹಿಗಳನ್ನು ಕೋರ್ಟಿಗೆ ಕರೆದುಕೊಂಡು ಹೋದರು ಕೋರ್ಟು ತಲಾ 6 ತಿಂಗಳ ಶಿಕ್ಷೆ ವಿಧಿಸಿತು. ಮತ್ತೊಂದು ಪ್ರಸಂಗದಲ್ಲಿ ಸಿರಸಿ ತಾಲ್ಲೂಕಿನ ತಿಗಣೆ ಎಂಬ ಗ್ರಾಮದಲ್ಲಿ ಪಟೇಲ್ ಗದಿಗಪ್ಪ ಗೌಡ ಎಂಬುವರು

ಹರಾಜಿನಲ್ಲಿ ನಾಲ್ಕು ಎಮ್ಮೆಗಳನ್ನು ಕೊಂಡಿದ್ದರು. ಸುಬ್ಬಮ್ಮ ಜೋಯಿಸ್ ನಾಯಕತ್ವದಲ್ಲಿ ಅಲ್ಲಿ ಉಪವಾಸ ಸತ್ಯಾಗ್ರಹ ನಡೆಯಿತು. ಸತ್ಯಾಗ್ರಹಿಗಳು ಕುಳಿತಿದ್ದ ಜಾಗಕ್ಕೆ ಮನೆಯ ಕೊಳಚೆ ನೀರನ್ನು ತಿರುಗಿಸಿದರು. ಸತ್ಯಾಗ್ರಹಿಗಳು ಮನೆಯ ಮುಂದೆ ಕುಳಿತುಕೊಳ್ಳದಂತೆ ಮಾಡುವ ಪ್ರಯತ್ನ ಅವರದ್ದಾಗಿತ್ತು. ತನ್ನ ಮನೆಯ ಮುಂದೆ ಕುಳೀತುಕೊಳ್ಳದಂತೆ ಮಾಡುವ ಪ್ರಯತ್ನ ಅವರದ್ದಾಗಿತ್ತು. ತನ್ನ ಮನೆಯ ಮುಂದೆ ಕೊಳಚೆ ನೀರು ನಿಲ್ಲುವುದೆಂಬ ಅರಿವೆಯೂ ಇರಲಿಲ್ಲ. ಆದರೆ ಮಹಿಳೆಯರು ವಿಚಲಿತರಾಗಲಿಲ್ಲ ಬಲಿಗೆ ಅಡಕೆ ಹಾಳೆಗಳು ಮತ್ತು ಗೋಣಿ ಚೀಲಗಳನ್ನು ಹಾಕಿಕೊಂಡು ಕುಳಿತುಕೊಂಡರು. ಅಷ್ಟಕ್ಕೆ ಬಿಡದೇ ರಾತ್ರಿ ವೇಳೆಯಲ್ಲಿ ರೌಡಿಗಳಿಗೆ ಕುಡಿಸಿ ಸತ್ಯಾಗ್ರಹಿ ಮಹಿಳೆಯರ ಮೇಲೆ ಎರಗುವಂತೆ ಮಾಡಿದನು. ಇದರಿಂದ ಮಹಿಳೆಯರು ಮತ್ತು ರೌಡಿಗಳ ನಡುವೆ ಒಂದು ಹೋರಾಟವೇ ನಡೆಯಿತು. ಈ ಸತ್ಯಾಗ್ರಹದಲ್ಲಿ ಮಹಾಲಕ್ಷ್ಮಮ್ಮ ಎಂಬ ಮಹಿಳೆಯು ತನ್ನ ಒಂದು ವರ್ಷದ ಮಗುವಿನೊಂದಿಗೆ ಪಾಲ್ಗೊಂಡಿದ್ದರು ಆಕೆಯ ಎದೆಯಲ್ಲಿ ಹಾಲಿಲ್ಲದೆ ಮಗುವು ಕಿರುಚಾಟ ಮಾಡುತ್ತಿತ್ತು. ಈ ನಡುವೆ ಒಬ್ಬ ರೌಡಿಯು ಮಹಾಲಕ್ಷ್ಮಮ್ಮನವರ ಕುಪ್ಪಸವನ್ನು ಹಿಡಿದು ಹರಿದು ಹಾಕಿದನು. ತನ್ನ ಮಾನಕ್ಕೆ ಧಕ್ಕೆ ಬರುವುದೆಂಬ ಬೀತಿಯಿಂದ ತನ್ನಲ್ಲಿದ್ದ ಚಾಕುವಿನಿಂದ ಇರಿದುಕೊಳ್ಳಲು ಆಕೆ ಪ್ರಯತ್ನಿಸಿದರು. ಆದರೆ ಚಾಕು ಕೈತಪ್ಪಿ ಆಕೆಯ ಎದೆಯನ್ನು ನಾಡದೆ ಕೈಯನ್ನು ಸೀಳಿಕೊಂಡು ಹೋಯಿತು. ಚಾಕುವನ್ನು ಕಂಡಕೂಡಲ್ಲೇ ರೌಡಿಗಳು ಓಡಿಹೋದರು. ಇತ್ತ ಮಹಾಲಕ್ಷ್ಮಮ್ಮನ ಕೈಯಿಂದ ದಾರಾಕಾರವಾಗಿ ರತ್ತ ಹರಿದು ಕೊಳಚೆ ನೀರನಲ್ಲಿ ಬೆರೆತು ರಕ್ತದ ಮಾಡುವೇ ನಿರ್ಮಾಣವಾಯಿತು. ಇಂತಹ ಪರಿಸ್ಥಿತಿಯನ್ನು ಗಮನಿಸಿದ ಗದಿಗಪ್ಪ ಗೌಡರ ಮಡದಿ ಗೌರಮ್ಮರವರು ಮಗುವಿಗೆ ಸ್ವಲ್ಪ ಹಾಲನ್ನು ನೀಡಲು ಸತ್ಯಾಗ್ರಹಿಗಳ ಬಳಿಗೆ ಬಂದರು ಇದನ್ನು ಗಮನಿಸಿದ ಗದಿಗಪ್ಪಗೌಡ ಹಾಲಿನ ಲೋಟವನ್ನು ಕಿತ್ತುಕೊಂಡು ಮಡದಿಗೆ ಹೊಡೆಯುತ್ತಾ ಒಳಗಡೆ ಎಳೆದುಕೊಂಡು ಹೋದರು. ಇದರಿಂದ ರೊಚ್ಚಿಗೆದ್ದ ಗದಿಗಪ್ಪ ಗೌಡರು ಮಡದಿ ಗೌರಮ್ಮ ಎಮ್ಮೆಗಳನ್ನು ಹಿಂತಿರಾಗಿಸಿದರೇ ಸರಿ ಇಲ್ಲವಾದರೆ ನಾನು ಸತ್ಯಾಗ್ರಹಿಗಳ ಜೊತೆ ಹೋಗುತ್ತೇನೆ ಎಂದ ಆಬ್ಬರಿಸಿದರು. ಇದರಿಂದ ಭಯಗೊಂಡ ಗದಿಗಪ್ಪ ಗೌಡರು ಗಾಬರಿಗೊಂಡು ಒಂದು ವೇಳೆ ಹಿಂತಿರುಗಿಸಿರೇ ಪೋಲೀಸ್‌ನವರ ಭಯ ಇಲ್ಲವಾದರೇ ಹೆಂಡತಿಯ ಭಯ ಎಂದು ಅರಿತ ಗದಿಗಪ್ಪ ಗೌಡ ಎಮ್ಮೆಗಳನ್ನು ಹಗ್ಗ ಬಿಚ್ಚಿ ಮನೆಯಿಂದ ಓಡಿಸಿ ಬಿಟ್ಟ ನನಗೆ ಎಮ್ಮೇ ಬೇಡ ಯಾರಾದರೂ ತೆಗೆದುಕೊಳ್ಳಿ ಎಂದು ಓಡಿಸಿದನು. ನಂತರ ಈ ಸತ್ಯಾಗ್ರಹಿ ಮಹಿಳೆಯರಿಗೂ ಸಹ ಶಿಕ್ಷೆಯನ್ನು ವಿಧಿಸಲಾಯಿತು.

ಮತ್ತೊಂದು ಪ್ರಸಂಗದಲ್ಲಿ ಅಂಕೋಲಾ ಹತ್ತಿರದಲ್ಲಿಯೇ ಸಾಣೆಕಟ್ಟೆ ಉಪ್ಪಿನ ಕೋಠಿ ಇತ್ತು. ಸರ್ಕಾರದ ಈ ಉಪ್ಪಿನ ಕೋಠಿಯ ಮೇಲೆ ನೂರಾರು ಜನ ಸತ್ಯಾಗ್ರಹಿಗಳು ಹಲ್ಲೇ ನಡೆಸಿದರು ಇದರಿಂದ ಅನೇಕರು ಕೈಕಾಲುಗಳನ್ನು ಮುರಿದುಕೊಂಡರೂ ಕೆಲವರು ಜೈಲು ಪಾಲಾದರು ಕರ ನೀರಾಕರಣೆಯಲ್ಲಿ ನಿರಾಕರಣೆ ಪ್ರೋತ್ಸಾಹ ಕೊಡುತ್ತಿದೆ ಮತ್ತು ಜಮೀನು ಕಂದಾಐವನ್ನು ಪಾವರಿಮಾಡದೆ ಕರನಿರಾಕರಣೆ ಚಳುವಳಿಯಲ್ಲಿ ಮುಖ್ಯಸ್ಥರಾಗಿದ್ದವರ ಮನೆಗಳನ್ನು ಜಪ್ತಿ ಮಾಡಿದರು. ಈ ಪ್ರಾಂತ್ಯದ ಹಳ್ಳಿಗಳಲ್ಲಿ ಇದ್ದವರು ನಾಡವ ಜನಾಂಗಕ್ಕೆ ಸೇರಿದವರಾಗಿದ್ದಾರು ಇಲ್ಲಿನ ಎಲ್ಲಾ ಗಂಡಸರಾ ಜೈಲಿಗೆ ಹೋಗಿದ್ದರು ಇಲ್ಲಿ ಹೆಂಗಸರು ಮಕ್ಕಳಿಗೆ ವಾಸಿಸಲು ಮನೆ ಇಲ್ಲದಂತಾಯಿತು. ಮಹಿಳೆಯರು ದಿಟ್ಟತನದಿಂದ ಹೋರಾಟ ಮಾಡಿದರು,

ಪೋಲೀಸ್‌ನವರ ಹೊಡೆತ ಬಡಿತ ಹೆಣ್ಣಮಕ್ಕಳ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ. ಪೋಲೀಸ್‌ನವರು ಮನೆಯ ಬಾಗಿಲು ನಿಲುವನ್ನು ಕಿತ್ತುಕೊಂಡು ಹೋಗುತ್ತಾರೆ. ಮಹಿಳೆಯರು ಬಾಗಿಲಿಲ್ಲದ ಮನೆಯಲ್ಲಿಯೇ ವಾಸಿಸಲು ತೊಡಗಿದರು. ಈ ಚಳುವಳಿಯನ್ನು ಮುರಿಯಲು ಪ್ರಮುಖರ ಸಭೆಯನ್ನು ಕರೆಯಲಾಯಿತು. ಅದರಲ್ಲಿ ಭಾಷಣ ಮಾಡಲು ಬೊಂಬಾಯಿಯಿಂದ ಗೌರ್ನರ್ ಬರುತ್ತಿದ್ದರು. ಸತ್ಯಾಗ್ರಹಿಗಳು ಅವರು ಬರುವ ದಾರಿಯಲ್ಲಿ ಕಪ್ಪು ಬಾವುಟ ಪ್ರದರ್ಶನ ಮಾಡಬೇಕೆಂದೂ ದಿಕ್ಕಾರ ಕೂಗಬೇಕೆಂದೂ ತೀರ್ಮಾನಿಸಿದ್ದರು ಅದಕ್ಕೆ ಅವಕಾಶ ಕೊಡದಂತೆ ಮಾಡಲು ಪೋಲೀಸರು ಸಾಕಷ್ಟು ಮಹಿಳೆಯರನ್ನು ಬಂದಿಸಿದ್ದರು. ಗೌರ್ನರು ಬಂದರು. ರಸ್ತಿಯ ಅಕ್ಕ ಪಕ್ಕದಲ್ಲಿ ಅಲ್ಲಲ್ಲಿಯೇ ಜನ ನಿಂತಿದ್ದರು ಆ ಗುಂಪಿನಲ್ಲಿ ಬೊಮ್ಮಕ್ಕ ಎಂಬ ಸತ್ಯಾಗ್ರಹಿಯು ಗುಟ್ಟಾಗಿ ತೆಗೆದುಕೊಂಡು ಹೋಗಿದ್ದ ಕಾಂಗ್ರೇಸ್ ಬಾವುಟವನ್ನು ಮೇಲೆ ಎತ್ತಿ ಹಿಡಿದು ಮಹಾತ್ಮ ಗಾಂಧೀ ಜೈ ಎಂದು ಕೂಗಿದಳು. ಇದರಿಂದಾಗಿ ಶಿಸ್ತಿನಿಂದ ಇರಬೇಕಾಗಿದ್ದ ಗುಂಪು ಆಶಿಸ್ತಿನಿಂದ ಕೂಡಿತ್ತು. ಹಾಗೇಯೇ ಮಾಣಿದೇವಿ ಮಹಿಳೆ ಕಾಡಿಗೆ ಹೋಗಿ ಪುರಳೆ ಸೌದೆಯನ್ನು ತಂದು ಅಂಕೋಲಾ ಟೌನ್‌ನಲ್ಲಿ ಒಂದಾಣೆ ಎರಡಾಣೆಗಡ ಮಾರಿ ಜೀವಿಸುತ್ತಿದ್ದಳು. ನಾಡಾರರ ಮಹಿಳೆಯಾಗಿದ್ದಳು. ಸ್ವಾತಂತ್ರ್ಯ ಸೇನಾನಿ ಎಂ.ಎಸ್.ಜೋಯಿಸ್‌ರ ಟಪಾಲನ್ನು ಆಕೆ ಒಯ್ದು ಅಂಕೋಲಾದಲ್ಲಿ ನಿರ್ದಿಷ್ಟ ಸ್ಥಳದಲ್ಲಿ ಇಟ್ಟು ಬರುವುದು ಆಕೆಯ ಕೆಲವಾಗಿತ್ತು. ಈ ಕೆಲಸವನ್ನು ಆಕೆ ಯಶಸ್ವಿಯಾಗಿ ನಿರ್ವಹಿಸುತ್ತಿದ್ದಳು. ಒಮ್ಮೆ ಪೋಲೀಸರ ಕೈಗೆ ಸಿಕ್ಕಿ ಬಿದ್ದಳು. ಪುರಳೆ ಸೌದೆ ಕಂತೆಯಲ್ಲಿ ಇದ್ದ ಲಕೋಟೆ ಪೋಲೀಸರ ವಶವಾಯಿತು. ಅವಳಿಗೆ ಚಿತ್ರಹಿಂಸೆ ಕೊಟ್ಟರು ಎಲ್ಲಿಂದ ತಂದೆ ? ಎಲ್ಲಿಗೆ ಒಯುತ್ತಿರುವೇ ಎಂದು ಪ್ರಶ್ನಿಸಿದರು ತಂದ ಸ್ಥಳ ಮತ್ತು ಇಡಬೇಕಾದ ಸ್ಥಳ ಬಿಟ್ಟು ಬೇರೆಯಾವ ವಿಷಯಗಳು ಆಕೆಗೆ ತಿಳಿಯದಿದ್ದರಿಂದ ಪೋಲೀಸ್‌ನವರು ಎಷ್ಟು ಹೊಡೆದರೂ ಯಮ ಯಾತನೆ ಕೊಟ್ಟರು. ಭಾರತ ಮಾತಾ ಕೀ ಜೈ ಗಾಂಧೀಜಿ ಕೀ ಜೈ ಅವೆರಡನ್ನು ಮಾತ್ರ ಅವಳ ಬಾಯಿಂದ ಕೇಳಬಹುದಾಗಿತ್ತು. ಪೋಲೀಸರ ಹೊಡೆತ ಬಡಿತಗಳು ಆಕೆಯ ದೇಹಕ್ಕೆ ಸಾಕಷ್ಟು ಘಾಸಿಯುಂಟು ಮಾಡಿದ್ದವು. ಅವುಗಳನ್ನು ಸಂತೈಸಲು ಹೋದ ಜನಕ್ಕೆ ಈ ಗಾಯಗಳು ಊತಗಳು ಎಲ್ಲವೂ ಗಾಂಧೀ ಮಂತ್ರದಿಂದ ವಾಸಿಯಾಗುತ್ತವೆ. ಔಷಧಿ ಬೇಕಾಗಿಲ್ಲ ಎಂದು ಹೇಳಿದಳೆಂದು ಸ್ವತಂತ್ರ ಸೇನಾನಿಯಾದ ಎಂ.ಎನ್.ಜೋಯಿಸರು ತಮ್ಮ ಆತ್ಮ ಕಥನದಲ್ಲಿ ಹೇಳಿಕೊಂಡಿದ್ದಾರೆ. ಮುಮದುವರಿದು ಸಿದ್ದಾಪುರದ ದೇವಿ ಎಂಬ ಮಹಿಳೆಯ ಘಟನೆಯನ್ನು ಜ್ಞಾಪಿಸಿಕೊಳ್ಳುತ್ತಾ ಸಿದ್ದಾಪುರದ ಸತ್ಯಾಗ್ರಹಿಗಳು ತಮ್ಮಲ್ಲಿದ್ದ ನಗ ನಾಣ್ಯಗಳನ್ನು ಒಟ್ಟಾಗಿ ಒಂದು ಹಡೆಯಲ್ಲಿ ಹಾಕಿ ಅದನ್ನು ಜೋಪಾನವಾಗಿ ಇಟ್ಟಿರಬೇಕೆಂದೂ ಚಳುವಳಿ ಮುಗಿದ ಮೇಲೆ ಅದನ್ನು ತಮಗೆ ಕೊಡಬೇಕೆಂದೂ ನಾರಾಯಣ ಹೆಗ್ಗಡೆಯವರ ಕೈಯಲ್ಲಿ ಕೊಟ್ಟಿದ್ದರು ತದನಂತರ ನಾರಯಣ ಹೆಗ್ಗಡೆಯವರು ಯಾರಿಗೂ ತಿಳಿಯದಂತೆ ಒಂದು ಹಳ್ಳ ತೆತೆದು ಅದನ್ನು ಹೂತಿಟ್ಟಿದ್ದರು. ದೇವಿ ಮತ್ತು ಅವಳ ಗಂಡ ನಾರಾಯಣ ಹೆಗ್ಗಡೆಯವರ ಮನೆಯ ಕೆಲಸದವರಾಗಿದ್ದರು. ಕೆಲವು ದಿನಗಳ ಬಳಿಕ ನಾರಾಯಣ ಹೆಗ್ಗಡೆಯವರು ಜೈಲಿಗೆ ಹೋದರು ಆನಂತರದಲ್ಲಿ ಬಂದ ಭಾರಿ ಮಳೆಯಿಂದ ಬಚ್ಚಿಟ್ಟಿದ್ದ ಹಂಡೆಯ ಮೇಲಿನ ಮಣ್ಣಿನ ಸ್ವಲ್ಪ ಭಾಗ ಕೊಚ್ಚಿ ಹೋಯಿತು. ಕಾಡಿಗೆ ಸೌದೆ ತರಲು ಹೋದ ದೇವಿಗೆ ಈ ಹಂಡೆಯು ಕಾಣಿಸಿತು ಹತ್ತಿರ ಹೋಗಿ ನೋಡಿದಾಗ ಹಂಡೆಯ ತುಂಬಾ ನಗನಾಣ್ಯಗಳು ತುಂಬಿದ್ದುದು ಕಂಡಿತು. ಗಂಡ ಕುಡುಕನಾದ ಕಾರಣ ಎಲ್ಲಿ ಅದನ್ನು ಎತ್ತಿಕೊಂಡು ಬಡುವನೋ ಎಂದು ಭಾವಿಸಿ ಆ ಹಂಡೆಯನ್ನು ತೆಗೆದುಕೊಂಡು ಹೋಗಿ

ಬೇರೆಡೆಯಲ್ಲಿ ಹೊರಟ್ಟು ಸರ್ಪಗಾವಲು ಕಾಯುತ್ತಿದ್ದಳು. ಪೋಲೀಸ್‌ನವರಿಗೆ ಹಂಡೆಯ ವಿಚಾರ ತಿಳಿದು ಹೋಯಿತು ಆವರು ಹಂಡೆಗಾಗಿ ಹುಡುಕಾಡಿದರು. ದೇವಿಯ ಗಂಡನನ್ನು ಕರೆದುಕೊಂಡು ಹೋಗಿ ಹಿಂಸೆ ನೀಡಿ ವಿಚಾರಿಸಿದರು. ಆದರೆ ಅವನಿಗೆ ಆ ವಿಚಾರ ತಿಳಿಯದೇ ಇದ್ದುದ್ದರಿಂದ ಅವನು ಏನೂ ಹೇಳಲು ಸಾಧ್ಯವಾಗಲಿಲ್ಲ ನಂತರ ದೇವಿಯನ್ನು ವಿಚಾರಣೆ ಮಾಡಿದರು. ಅವಳಿಗೆ ಎಷ್ಟೇ ಹಿಂಸೆ ನೀಡಿದರೂ ಅವಳು ಹಂಡೆಯ ವಿಚಾರ ಹೇಳಲಿಲ್ಲ. ಸ್ವಲ್ಪ ಸಮಯದ ನಂತರ ನಾರಾಯಣ ಹೆಗ್ಗಡೆಯವರು ಜೈಲಿನಿಂದ ಬಿಡುಗಡೆಯಾಗಿ ಮನೆಗೆ ಬಂದರು ತಾವು ಹೂತಿಟ್ಟಿದ್ದ ಜಾಗವನ್ನು ಅಗೆದು ನೋಡಿದರು. ಹಂಡೆ ಸಿಗದೇ ಇದ್ದಾಗ ಬೇರೆಡೆಗೆ ಸಸ್ಥಳಾಂತರಿಸಿದ್ದ ಕಾರಣವನ್ನು ತಿಳಿಸಿದಳು ಇದರಿಂದ ತೃಪ್ತರಾದ ನಾರಾಯಣ ಹೆಗ್ಗಡೆಯವರು ಅವಳಿಗೆ ಅಪಾರ ನಗ ನಾಣ್ಯಗಳನ್ನು ಬಹುಮಾನವಾಗಿ ಕೊಡಲು ಹೋದರು ಆದರೇ ದೇವಿಯು ಅದನ್ನು ನಿರಾಕರಿಸುತ್ತಾ ನೀವೆಲ್ಲರೂ ಗಾಂಧಿ ಅನುಯಾಯಿಗಳು ನಿಮಗೆ ನಾವು ಸೇವೆ ಮಾಡಬೇಕೆ ಹೊರತು ನಿಮ್ಮಿಂದ ಚಳುವಳಿಯುವುದು.

**ಕಮಲಾದೇವಿ ಚಟ್ಟೋಪಾಧ್ಯಾಯ 1903–1988** : ಸ್ವಾತಂತ್ರ್ಯಂದೋಲನದ ನೀಲಾಕಾಶದಲ್ಲಿ ಹೊಳೆಯುವ ಓರ್ವ ಪ್ರಮುಖ ಮಹಿಳೆ. ಮಂಳೂರಿನ ಅನಂತಯ್ಯ ಧಾರೇಶ್ವರ ಮತ್ತು ಗಿರಿಜಾಬಾಯಿ ದಂಪತಿಯ ಮಗಳು. ಹಾದಿನಾಲ್ಕನೇ ವಯಸ್ಸಿಗೆ ಕಮಲಾಳನ್ನು ಮದುವೆ ಮಾಡಿಕೊಟ್ಟರು. ಅನಾರೋಗ್ಯಕ್ಕೆ ತುತ್ತಾದ ಪತಿ ಒಂದೇ ವರ್ಷಕ್ಕೆ ತೀರಿಕೊಂಡರು. ಮುಂದೆ ತಾಯಿಯ ಸಹಕಾರದಿಂದ ಮದರಾಸಿನಲ್ಲಿನಶಿಕ್ಷಣ ಮುಂದುವರಿಸಿ, ಸರೋಜಿನಿ ನಾಯ್ಡು ಅವರ ಹತ್ತಿರದ ಸಂಬಂಧಿ ಹರೀಂದ್ರನಾಥ ಚಟ್ಟೋಪಾಧ್ಯಾಯಎಂಬವರನ್ನು ವಿವಾಹವಾಗಿ ಕಮಲಾದೇವಿ ಚಟ್ಟೋಪಾಧ್ಯಾಯ ಆದೆರು ಅನಂತರ ವಿದೇಶಕ್ಕೆ ಹೋಗಿ ಉನ್ನತ ಶಿಕ್ಷಣ ಪಡೆದರಲ್ಲದೆ ಹಲವಾರು ದೇಶಗಳನ್ನು ಸುತ್ತಿದ್ದರು.

ಗಾಂಧೀಜಿಯವರು ಸ್ವಾತಂತ್ರ್ಯಾಂದೋಲನಕ್ಕೆ ಪ್ರವೇಶಿಸಿದ ಬಳಿಕ ಕಮಲಾದೇವಿ ಕಾಂಗ್ರೆಸ್ ಪಕ್ಷದ ಸದಸ್ಯರಾಗಿ ಬೇರೆ ಬೇರೆ ಚಳುವಳಿಗಳಲ್ಲಿ ಭಾಗವಹಿಸಿ ನಾಲ್ಕು ಬಾರಿ ಸೆರೆಮನೆ ವಾಸ ಅನುಭವಿಸಿದರು. ಅವುಗಳಲ್ಲಿ ಉಪ್ಪಿನ ಸತ್ಯಾಗ್ರಹ ಪ್ರಮುಖವಾದದ್ದು. ಅಖಿಲ ಭಾರತ ಮಹಿಳಾ ಪರಿಷತ್ತಿನ ಅಧ್ಯಕ್ಷರಾಗಿ ದೇಶದ್ಯಂತ ಸಂಚರಿಸಿ ಸ್ವಾತಂತ್ರ್ಯ ಹೋರಾಟದ ಕಿಚ್ಚನ್ನು ಮಹಿಳೆಯರಲ್ಲಿ ಹೊತ್ತಿಸಿದರು. ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ನಿರಾಶ್ರಿತರಿಗಾಗಿ ಸಹಕಾರಿ ಸಂಘ ಸ್ಥಾಪಿಸಿ ಅದರಲ್ಲಿ ರಾತ್ರಿ ಹಗಲು ದುಡಿದರು. ಸ್ವಾತಂತ್ರ್ಯ ದೊರೆತ ಬಳಿಕ ಅಖಿಲ ಭಾರತ ಕರಕುಶಲ ಮಂಡಳಿ ಅಧ್ಯಕ್ಷರಾಗಿ ನೇಮಕಗೊಂಡು, ಈಡನ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಮಹಿಳೆಯರ ಅಭ್ಯುದಯದ ಬಗ್ಗೆ ಭಾಷಣ ಮಾಡಿದರು. ಇವರಿಗೆ ಪದ್ಮಭೂಷಣ, ಪದ್ಮವಿಭೂಷಣ ಮತ್ತು ಅಂತರಾಷ್ಟ್ರೀಯ ಪ್ರಶಸ್ತಿಯಾದ ರೇಮನ್ ಮ್ಯಾಗೆಸೇಸೆ ಪ್ರಶಸ್ತಿ ಲಭ್ಯವಾಗಿದೆ. ಈಕೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿದ ಪ್ರಥಮ ಮಹಿಳೆ ಮತ್ತು ಭಾರತದಲ್ಲಿ ಮೊಟ್ಟಮೊದಲಿಗೆ ಚುನಾವಣೆಯಲ್ಲಿ ಸ್ಪರ್ಧಿಸಿದ ಮಹಿಳೆಯೂ ಹೌದು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ವಿಚಾರಣೆ ಇಲ್ಲದೆ ಇವರನ್ನು ಬಂಧಿಸಿ ನೇರವಾಗಿ ಜೈಲಿಗೆ ಹಾಕಲಾಯಿತು.

ಕುದ್ಮಲ್ ರಂಗರಾಯರ ಮಗಳು ರಾಧಾಬಾಯಿ ಸುಬ್ಬರಾಯನ್ ತಂದೆಯ ಸಮಾಜಮುಖೀ ಚಿಂತನೆಗಳನ್ನು ರೂಢಿಸಿಕೊಂಡು ಬಾಲ್ಯದಿಂದಲೇ ಪ್ರಗತಿಗಾಮಿ ಕೆಲಸಕ್ಕೆ ಕೈಹಾಕಿದವರು, ಅಂತಜಾರ್ತಿ

ವಿವಾಹವಾದರು. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದರು, ಸಮಾಜ ಸೇವೆಗೆ ಹೆಸರಾದವರು. ಬಳಿಕ ಶಾಸನಸಭೆಯ ಸದಸ್ಯರೂ ಆದರು ಇದೇ ಕಾಲಕ್ಕೆ ಕಾರ್ನಾಡು ಸದಾಶಿವರಾಯರ ಮಗಳು ಸುಗುಣಾ ದೇಸಾಯಿ ಅವರೂ ಗಾಂಧೀಜಿಯವರ ಹರಿಜನ ಸೇವೆಯಿಂದ ಪ್ರೇರಣೆ ಪಡೆದು ಹರಿಜನ ಸೇವೆಯಲ್ಲಿ ತೊಡಗಿದರು.

ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲು ಸೇರಿದ ಪ್ರಥಮ ಮಹಿಳೆ ಮತ್ತು ಭಾರತದಲ್ಲಿ ಮೊಟ್ಟಮೊದಲಿಗೆ ಚುನಾವಣೆಯಲ್ಲಿ ಸ್ಪರ್ಧಿಸಿದ ಮಹಿಳೆಯೂ ಹೌದು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ವಿಚಾರಣೆ ಇಲ್ಲದೆ ಇವರನ್ನು ಬಂಧಿಸಿ ನೇರವಾಗಿ ಜೈಲಿಗೆ ಹಾಕಲಾಯಿತು.

**ಉಪಸಂಹಾರ :**

ಮಹಾತ್ಮ ಗಾಂಧೀಜಿಯವರ ಯುಗದಲ್ಲಿ ಕರ್ನಾಟಕದಲ್ಲಿ ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ದಲಿತ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಶ್ರಮಿಸಿದರು, ಹುಬ್ಬಳ್ಳಿಯಲ್ಲಿ ಮಹಿಳಾ ವಿದ್ಯಾಪೀಠವನ್ನು ಸ್ಥಾಪಿಸಿದರು ಮಹಿಳೆಯರು ಅಸಹಕಾರ ಚಳುವಳಿಯಲ್ಲಿ ಮತ್ತು ಇತರೆ ಚಳುವಳಿಗಳು ಮಹಿಳೆಯರು ಕರ್ನಾಟಕದ ಹೋರಾಟಗಳಲ್ಲಿ ಭಾಗವಹಿಸಿದರು.

**ಆಕರ ಗ್ರಂಥಗಳು**


- ಅಬೆಲ್ ಎಂ. 'ಭಾರತೀಯ ರಾಷ್ಟ್ರೀಯ ಚಳುವಳಿ' 2005.
- ಅಹ್ಮದ್ ತಲಕ್ 'ಮೋಹನ್‌ದಾಸ್ ಗಾಂಧಿ', ನಾಘರಿಕ ಅಸಹಕಾರದ ಪ್ರಯೋಗಗಳು, 2018.
- ಹಾಲತಿ ಸೋಮಶೇಖರ್ ಕರ್ನಾಟಕ ದಲಿತ ಚಳುವಳಿಯಲ್ಲಿ ಮಹಿಳೆ ವಿಸ್ಮಯ ಪ್ರಕಾಶನ, ಕುವೆಂಪು ನಗರ ಮೈಸೂರು, 2011.
- ಮೋಹನದಾಸ್ ಕರಮಚಂದ್ ಗಾಂಧಿ 'ಮಹಾತ್ಮ ಗಾಂಧೀಯವರ ಸಂಗ್ರಹಿಸಿದ ಕೃತಿಗಳು'. 1994
- ಸಿದ್ದವನಹಳ್ಳಿ ಕೃಷ್ಣ ಶರ್ಮ 'ಗಾಂಧಿ ಮತ್ತು ಕರ್ನಾಟಕ' ಶ್ರೀ ಬಿ.ಜಿ.ಗುತ್ತಲ ಸಂಯುಕ್ತ ಕರ್ನಾಟಕ ಪ್ರೆಸ್, ಬೆಂಗಳೂರು, 1969.
- ಶೇಖರ.ಎಂ.ಎಸ್ 'ಕುದ್ಮಲ್ ರಂಗರಾವ್' ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು, 2009.
- ಸಿದ್ದಲಿಂಗಯ್ಯ ಹೈತಾಳ್ 'ಭಾರತ ಸ್ವಾತಂತ್ರ್ಯ ಹೋರಾಟಗಾರರು, ಸ್ಟೂಡೆಂಟ್ ಬುಕ್ ಹೌಸ್, ಬೆಂಗಳೂರು, 1995.
- ರಾಮಸ್ವಾಮಿ ಎ.ಆರ್ 'ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು' ರಾಷ್ಟ್ರೋತ್ಥಾ ಸಾಹಿತ್ಯ ಬೆಂಗಳೂರು 1997

- ದೇಶಪಾಂಡೆ ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮ 2 ಸಂಪುಟಗಳು ಧಾರವಾಡ 1969.
- ನೇಮಿಚಂದ್ರ ಹೋರಾಟದ ಹಾದಿಯಲ್ಲಿ ಧೀಮಂತ ಮಹಿಳೆಯರು, ನವ ಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು, 2011.
- ಬಸವರಾಜ ಕುಮಾರ್ 'ಸ್ವಾತಂತ್ರ್ಯ' ಗಾಂಧೀ ಸ್ಮಾರಕ ನಿಧಿ, ಬೆಂಗಳೂರು, 1960